ಪಿ.ಡಬ್ಲ್ಯೂ- 1

**ದಿನಾಂಕಃ 17-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ ವಿ.ಹೆಚ್.ಟಿ., ಅರ್ಜಿದಾರರ ಪರ ವಕೀಲರಿಂದಃ**

ಈ ದಿನ ನಾನು ನ್ಯಾಯಾಲಯದಲ್ಲಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿವೆ ಹಾಗೂ ಅದರಲ್ಲಿರುವ ಸಹಿಗಳು ನನ್ನವೇ ಆಗಿರುತ್ತವೆ.

ನನ್ನ ಅರ್ಜಿಗೆ ಪೂರಕವಾಗಿ ಹಾಜರುಪಡಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ.

ಹಾವೇರಿ ಟ್ರಾಫಿಕ್ ಪೋಲಿಸ ಠಾಣೆಯ ಅಪರಾಧ ಸಂಖ್ಯೆ 59/2024 ರ ಪ್ರ.ವ. ವರದಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು **ನಿಪಿ-1** ಎಂದು, ದೂರಿನ ಪ್ರತಿಯನ್ನು **ನಿಪಿ-2** ಎಂದು, ಸ್ಥಳ ಪಂಚನಾಮೆಯ ದೃಢೀಕೃತ ನಕಲನ್ನು **ನಿಪಿ-3** ಎಂದು, ವಾಹನ ಜಪ್ತು ಪಂಚನಾಮೆಯ ದೃಢೀಕೃತ ನಕಲನ್ನು **ನಿಪಿ-4** ಎಂದು, ಅರ್ಜಿದಾರರ ಗಾಯದ ಪ್ರಮಾಣ ಪತ್ರದ ದೃಢೀಕೃತ ನಕಲನ್ನು **ನಿಪಿ-5** ಎಂದು, ಐ.ಎಂ.ವಿ. ವರದಿಯ ದೃಢೀಕೃತ ನಕಲನ್ನು **ನಿಪಿ-6** ಎಂದು, ಅಂತಿಮ ವರದಿಯ ದೃಢೀಕೃತ ನಕಲನ್ನು **ನಿಪಿ-7** ಎಂದು, ಕಿಮ್ಸ, ಹುಬ್ಬಳ್ಳಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಬಿಡುಗಡೆ ಹೊಂದಿದ ಬಗ್ಗೆ ಡಿಸ್ಚಾರ್ಜ ಸಮರಿಯನ್ನು **ನಿಪಿ-8** ಎಂದು, ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು **ನಿಪಿ-9** ಎಂದು, ಎರಡು ಎಕ್ಸ-ರೇಗಳನ್ನು ಕ್ರಮವಾಗಿ **ನಿಪಿ-10** ಮತ್ತು **ನಿಪಿ-11** ಎಂದು, ಒಟ್ಟು 12 ಮೆಡಿಕಲ್ ಬಿಲ್‌ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ **ನಿಪಿ-12** ಎಂದು, ನನ್ನ ಆಧಾರ ಕಾರ್ಡನ್ನು **ನಿಪಿ-13** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಂ.ಹೆಚ್.ಡಬ್ಲ್ಯೂ. ಎದುರುದಾರರ ಪರ ವಕೀಲರಿಂದಃ**

1. ನನಗೆ 56 ವರ್ಷ ವಯಸ್ಸಾಗಿರುತ್ತದೆ. ನನಗೆ 56 ವರ್ಷ ವಯಸ್ಸಾಗಿರುತ್ತದೆ ಎನ್ನುವುದಕ್ಕೆ ಯಾವ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ನನಗೆ 70 ವರ್ಷ ವಯಸ್ಸು ಆಗಿರುತ್ತದೆ ಎಂದರೆ ಸರಿಯಲ್ಲ.

ಪಿ.ಡಬ್ಲ್ಯೂ- 1

2. ನಾನು ಅಪಘಾತವಾದ ದಿನ ಸಂಜೆ 5-00 ಗಂಟೆಗೆ ಬಸ್‌ನಲ್ಲಿ ಹೊರಟ್ಟಿದ್ದೆ. ಅಪಘಾತವು ಹಾವೇರಿಯ ಬಸ್ ಸ್ಟಾಪ್‌ನಲ್ಲಿ ಆಗಿರುತ್ತದೆ. ನಾನು ಬಸ್ ಸಂಪೂರ್ಣವಾಗಿ ನಿಂತ ಮೇಲೆ ಬಸ್ ಹತ್ತಿರುತ್ತೇನೆಂದರೆ ಸಾಕ್ಷಿಯು ನಾನು ಬಸ್ ಹತ್ತುವಾಗ ಬಸ್ ಚಾಲನೆ ಮಾಡಿರುತ್ತಾನೆ ಎಂದು ನುಡಿಯುತ್ತಾರೆ. ನಾನು ಬಸ್ ಮೆಟ್ಟಿಲು ಹತ್ತುವಾಗ ಬಿದ್ದಿರುತ್ತೇನೆ ಎಂದರೆ ಸರಿಯಲ್ಲ. ಸದ್ರಿ ಅಪಘಾತವು ಬಸ್ ಚಾಲಕನ ತಪ್ಪಿನಿಂದ ಆಗಿರುವುದಿಲ್ಲ, ನನ್ನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತವಾದ ನಂತರ ನಾನು ಹಾವೇರಿಯಲ್ಲಿಯ ಆಸ್ಪತ್ರೆಗೆ ಹೋಗಿರುತ್ತೇನೆ. ಯಾವ ಆಸ್ಪತ್ರೆಗೆ ಹೋಗಿದ್ದೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ಅಪಘಾತದಿಂದ ನನಗೆ ಕಾಲಿಗೆ ಪೆಟ್ಟಾಗಿರುತ್ತದೆ. ನಾನು ಸರ್ಕಾರಿ ಆಸ್ಪತ್ರೆಗೆ ತೋರಿಸಿದ ಮೇಲೆ ಮನೆಗೆ ಹೋಗಿರುತ್ತೇನೆ ಎಂದರೆ ಸರಿ. ಆ ನಂತರ ಬೇರೆ ಯಾವ ಆಸ್ಪತ್ರೆಗೂ ಹೋಗಿಲ್ಲ ಎಂದರೆ ಸರಿ.

**3.** ಅಪಘಾತವಾದ ನಂತರ ನಾನು ಪೋಲಿಸ ಠಾಣೆಗೆ ಹೋಗಿ ದೂರು ಸಲ್ಲಿಸಿಲ್ಲ. ನನಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಖರ್ಚು ಮತ್ತು ಔಷಧಿಗಳ ಖರ್ಚು ಒಟ್ಟು ರೂ. 4,00,000/- ಆಗಿರುತ್ತದೆ ಎಂದು ನನ್ನ ಅರ್ಜಿಯಲ್ಲಿ ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಆ ರೀತಿ ರೂ.4,00,000/- ಗಳು ಖರ್ಚು ಆಗಿರುತ್ತದೆ ಎಂದು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿಲ್ಲ. ನಿಮ್ಮ ಸಹಾಯಕರಾಗಿ ಕೆಲಸ ಮಾಡಿದ್ದಕ್ಕೆ ವೇತನವಾಗಿ ರೂ.3,00,000/- ಗಳ ಖರ್ಚು ಆಗಿರುತ್ತದೆ ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿರುತ್ತೀರಾ ಎಂದು ಕೇಳಿದ ಪ್ರಶ್ನೆಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಅರ್ಜಿಯಲ್ಲಿ ನನ್ನ ಮುಂದಿನ ದಿನಮಾನಗಳಲ್ಲಿ ಪಡೆಯಬಹುದಾದ ಹೆಚ್ಚಿನ ವೇತನ ರೂ. 10,00,000/- ಗಳನ್ನು ಕಳೆದುಕೊಂಡಿರುತ್ತೇನೆಂದು ಬರೆಸಿದ್ದೀಯಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

**ಪಿ.ಡಬ್ಲ್ಯೂ- 1**

**4.** ಅಪಘಾತವಾಗುವ ಪೂರ್ವದಲ್ಲಿ ನಾನು ಹೊಲದ ಕೆಲಸ ಮಾಡುತ್ತಿದ್ದೆ, ದಿನಕ್ಕೆ ರೂ. 200/- ಸಂಬಳ ಸಿಗುತ್ತಿತ್ತು. ನಿಮ್ಮ ಅರ್ಜಿಯಲ್ಲಿ ತಿಂಗಳಿಗೆ ರೂ. 35,000/- ಗಳು ಬರುತ್ತಿತ್ತು ಎಂದು ಹೇಳಿ ಬರೆಯಿಸಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದ್ರಿ ಅಪಘಾತವು ನನ್ನ ತಪ್ಪಿನಿಂದ ಆಗಿದ್ದು, ಕೆಎಸ್ ಆರ್ ಟಿ ಸಿ ಬಸ್ ಚಾಲಕನ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಮೆಡಿಕಲ್ ಬಿಲ್‌ಗಳನ್ನು ಸೃಷ್ಠಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸದ್ರಿ ಮೆಡಿಕಲ್ ಬಿಲ್‌ಗಳು ಯಾವ ಆಸ್ಪತ್ರೆಯವು ಎಂದು ಹೇಳಲು ನಾನು ಶಾಲೆ ಕಲಿತಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ನಾನು ಅಪಘಾತವಾಗುವುದಕ್ಕಿಂತ ಪೂರ್ವದಲ್ಲಿ ಎಲ್ಲಿಯೂ ಕೆಲಸಕ್ಕೆ ಹೋಗುತ್ತಿರಲಿಲ್ಲ ಮನೆಯಲ್ಲಿಯೇ ಇರುತ್ತಿದ್ದೆ ಎಂದರೆ ಸರಿಯಲ್ಲ.

5. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಬರೆಯಲು ನಾನೇ ಮಾಹಿತಿಯನ್ನು ಕೊಟ್ಟಿರುತ್ತೇನೆ. ಅಪಘಾತದಿಂದ ನನಗೆ ಅಂಗನ್ಯೂನ್ಯತೆ ಆಗಿರುತ್ತದೆಂದು ಸುಳ್ಳು ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ – ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

– ಸಹಿ –

1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.